1) ಮಂಡ್ಯ ನಗರಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡಲು ಕಾರ್ಯಗತವಾಗಿರುವ, ಮೊದಲನೇ ಹಂತದ ಯೋಜನೆಯು ನಗರದ ಜನತೆಗೆ ಕುಡಿಯುವ ನೀರಿನ ಅವಶ್ಯಕತೆಗನುಗುಣವಾದಂತೆ ಪೂರೈಸಲು ಸಮರ್ಥವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

2) ಹಾಗಿದ್ದಲ್ಲಿ, ಮಂಡ್ಯ ನಗರದ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

3) ಮಂಡ್ಯನಗರದಲ್ಲಿ ಒಳಚರಂಡಿ ಯೋಜನೆಯ ಕಾರ್ಯ ಯಾವಾಗ ಪ್ರಾರಂಭವಾಯಿತು, ಹಾಗೂ ಇದರ ಅಂದಾಜು ಮೊತ್ತವಷ್ಟು ಮತ್ತು ಯೋಜನೆಯ ಕಾರ್ಯ ಯಾವ ಹಂತದಲ್ಲಿದೆ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

1) ಹೌದು.

2) ರೂ. 1,360.00 ಲಕ್ಷಗಳಿಗೆ ಕುಡಿಯುವ ನೀರಿನ ಯೋಜನೆಯ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯು ಪರಿಶೀಲನೆಯಲ್ಲಿದೆ.

3) 1981 ರಲ್ಲಿ ಮಂಡ್ಯ ನಗರದ ಒಳಚರಂಡಿ ಯೋಜನೆಗೆ 132.00 ಲಕ್ಷ ರೂ.ಗಳ ಅಂದಾಜಿನಲ್ಲಿ ಜೀವವಿಮಾ ನಿಗಮದ ಆರ್ಥಿಕ ನೆರವಿನ ಮೇರೆಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಸದರಿ ಕೆಲಸವನ್ನು 1982 ರಲ್ಲಿ ಕೈಗೊಳ್ಳಲಾಯಿತು. ಈ ಪೈಕಿ ಎರಡು ರೈಲ್ವೆ ಕ್ರಾಸಿಂಗ್‌ಗಳನ್ನು ಬಿಟ್ಟು, ಒಳಚರಂಡಿ ಕೊಳವೆ ಮಾರ್ಗ ಮತ್ತು ಔಟ್‌ಫಾಲ್ ಕೊಳವೆ ಮಾರ್ಗದ ಕಾಮಗಾರಿಗಳನ್ನು ಮುಗಿಸಲಾಗಿದೆ. ಶುದ್ಧೀಕರಣಾಗಾರವನ್ನು ನಿರ್ಮಿಸಲು ಕಂದಾಯ ಇಲಾಖೆಯವರು ಇನ್ನೂ ಜಮೀನನ್ನು ಮಂಡಳಿಗೆ ವಹಿಸಿಕೊಟ್ಟಿಲ್ಲ. ಕಾರಣ ಒಂದನೇ ಒಳಚರಂಡಿ ವಿಭಾಗವನ್ನು ನಿರ್ಮಿಸಲು ಬೇಕಾಗುವ ಜಮೀನನ್ನು ಮಂಡಳಿಗೆ ವಹಿಸಿಕೊಟ್ಟಿಲ್ಲ. ಎರಡನೇ ಒಳಚರಂಡಿ ವಿಭಾಗವನ್ನು ನಿರ್ಮಿಸಲು ಬೇಕಾಗಿರುವ ಜಮೀನಿನಲ್ಲಿ ಈಗಾಗಲೇ ವಾಸವಾಗಿರುವವರು ಮಂಡ್ಯ ಜಿಲ್ಲಾಧಿಕಾರಿಯವರ ವಿರುದ್ಧವಾಗಿ ಜಾಗವನ್ನು ಮಂಡಳಿಯು ವಶಪಡಿಸಿಕೊಂಡಿದ್ದಕ್ಕೆ ಅಪಪಾಲನ್ನು ಕೊಟ್ಟಿರುತ್ತಾರೆ.

ಶ್ರೀ ಎಂ. ಎಸ್. ಆತ್ಮಾನಂದ :– ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಮಂತ್ರಿಗಳು ಸುಮಾರು 13.6 ಕೋಟಿ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯು ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಈಗಾಗಲೇ ಮಂಡ್ಯ ನಗರದಲ್ಲಿರತಕ್ಕಂಥ ಕುಡಿಯುವ ನೀರಿನ ಕೊರತೆ ಬಗ್ಗೆ ಮಾನ್ಯ ಮಂತ್ರಿಗಳಿಗೆ ನಿವೇದಿಸಿಕೊಳ್ಳಲಾಗಿದೆ. ಈ ಯೋಜನೆಯನ್ನು ಯಾವಾಗ ಕೈಗೊಳ್ಳುತ್ತಿರಿ ಎಂದು ಕೇಳುತ್ತೇನೆ ಮತ್ತು ಆದಷ್ಟು ಶೀಘ್ರವಾಗಿ ಇದನ್ನು ಕೈಗೆತ್ತಿಕೊಳ್ಳಬೇಕೆಂದು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತು, ಒಳಚರಂಡಿ ಯೋಜನೆಯ ಒಂದನೇ ಹಂತ ಮುಗಿದಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ಒಂದನೇ ಹಂತದ ಯೋಜನೆಯಿಂದ ಫಲಾನುಭವಿಗಳಿಗೆ ಕನೆಕ್ಷನ್ ಕೊಡುತ್ತೀರಾ ? ಹಾಗೂ ಎರಡನೇ ಹಂತದ ಯೋಜನೆಯನ್ನು ಶೀಘ್ರವಾಗಿ ಮುಗಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ :– ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರಕ್ಕೆ ಕುಡಿಯುವ ನೀರಿನ ಎರಡನೇ ಹಂತದ ಯೋಜನೆಯನ್ನು ಮಾಡಲು ಸುಮಾರು 13 ಕೋಟಿ 60 ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿದ್ದೇವೆ. ಬರುವ ಆರ್ಥಿಕ ವರ್ಷದಲ್ಲಿ ಸರ್ಕಾರದಿಂದ ಮಂಜೂರಾತಿ ಪಡೆದು ಆದಷ್ಟು ಬೇಗ ಕೆಲಸ ಪ್ರಾರಂಭ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. ಮತ್ತು ಈ ಒಳಚರಂಡಿ ಲೈನನ್ನು ಈಗಾಗಲೇ ಅಲ್ಲಿ ಹಾಕಿದ್ದೇವೆ. ಆದರೆ ಅದನ್ನು disposal ಮಾಡಬೇಕಾದರೆ ಅದನ್ನು Oxidisation plant ಮಾಡಬೇಕಾಗಿದೆ. ಆ ಜಾಗ ಡೆಪ್ಯೂಟಿ ಕಮಿಷನರ್ ಅವರಿಂದ ಬರಬೇಕಾಗಿದೆ. ಅದು ಬಂದಕೂಡಲೇ ಆದಷ್ಟು ಬೇಗ oxidisation plant ನ್ನು ಮಂಡ್ಯದಲ್ಲಿ ಪ್ರಾರಂಭ ಮಾಡುತ್ತೇವೆ.

ವಿಷಯ :– ಆಲೂರು ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 242 (905)

ಶ್ರೀ ಬಿ. ಆರ್. ಗುರುದೇವ್ (ಸಕಲೇಶಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಜಿಲ್ಲೆ ಆಲೂರು ತಾಲ್ಲೂಕಿಗಳಲ್ಲಿ ಜನರಲ್ ಆಸ್ಪತ್ರೆ ಹಾಗೂ ಪಿ. ಹೆಚ್. ಯು. ಪಿ. ಹೆಚ್. ಸಿ. ಸಂಖ್ಯೆ ಎಷ್ಟು ಮತ್ತು ಎಷ್ಟು ಸಿಬ್ಬಂದಿ ವರ್ಗಗಳು ಇರುತ್ತವೆ ?

ಆ) ಸದರಿ ತಾಲ್ಲೂಕುಗಳಲ್ಲಿರುವ ಎಲ್ಲಾ ಆಸ್ಪತ್ರೆಗಳು ಹಾಗೂ ಪಿ.ಹೆಚ್.ಯು. ಪಿ.ಹೆಚ್.ಸಿ. ಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶ ಸರ್ಕಾರದ ಗಮನದಲ್ಲಿರುವುದೇ ?

ಇ) ಹಾಗಿದ್ದಲ್ಲಿ ಮಲೆನಾಡು ಪ್ರದೇಶದಲ್ಲಿ ಸರ್ಕಾರ ಹಳ್ಳಿ ಗ್ರಾಮಸ್ಥರ ಆರೋಗ್ಯವನ್ನು ಸುಧಾರಣೆ ಮಾಡಲು ಉದ್ದೇಶಿಸಿದೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :–

ಅ) ಆಲೂರು ತಾಲ್ಲೂಕಿನಲ್ಲಿ 2 ಪ್ರಾಥಮಿಕ ಆರೋಗ್ಯ ಘಟಕಗಳು ಮತ್ತು 2 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು ಅವುಗಳಲ್ಲಿ ವೈದ್ಯಾಧಿಕಾರಿಗಳು ಸೇರಿದಂತೆ 66 ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲು ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗವು ಕ್ರಮ ಕೈಗೊಂಡು, ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಂದರ್ಶನಗಳನ್ನು ವಿವಿಧ ಕೇಂದ್ರಗಳಲ್ಲಿ ನಡೆಸುತ್ತಿದೆ. ಆಯ್ಕೆಯಾದ ವೈದ್ಯರುಗಳ ಪಟ್ಟಿ ಲೋಕಸೇವಾ ಆಯೋಗದಿಂದ ಬಂದ ನಂತರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು. ಇದಲ್ಲದೆ ಮಿಕ್ಕ ಸಿಬ್ಬಂದಿ ವರ್ಗದವರನ್ನು ತುಂಬಲು ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳವರು ಕ್ರಮ ತೆಗೆದುಕೊಂಡಿರುತ್ತಾರೆ.

ಇ) ಹೌದು.

ಶ್ರೀ ಬಿ. ಆರ್. ಗುರುದೇವ್ :– ಅಧ್ಯಕ್ಷರೇ, ನಾನು ಕೇಳಿದಂಥ ಪ್ರಶ್ನೆ ಈ ರೀತಿ ಇದೆ. ಹಾಸನ ಜಿಲ್ಲೆ ಆಲೂರು ತಾಲ್ಲೂಕಿನಲ್ಲಿ ಜನರಲ್ ಆಸ್ಪತ್ರೆ ಹಾಗೂ ಪಿ.ಹೆಚ್.ಯು.; ಪಿ.ಹೆಚ್.ಸಿ. ಗಳ ಸಂಖ್ಯೆ ಎಷ್ಟು ಮತ್ತು ಎಷ್ಟು ಸಿಬ್ಬಂದಿ ವರ್ಗದವರು ಇದ್ದಾರೆಂದು ಕೇಳಿದ್ದೆ. ಅದಕ್ಕೆ ಆಲೂರು ತಾಲ್ಲೂಕಿನಲ್ಲಿ ಎರಡು ಪ್ರಾಥಮಿಕ ಆರೋಗ್ಯ ಘಟಕಗಳು ಮತ್ತು ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ ಎಂದು ಹೇಳಿದ್ದಾರೆ. ನನ್ನ ಉದ್ದೇಶ ಇಷ್ಟೇ; ಆಲೂರು ತಾಲ್ಲೂಕು ಸುಮಾರು 66 ಸಾವಿರ ಜನಸಂಖ್ಯೆ ಇರುವಂಥ ಒಂದು ತಾಲ್ಲೂಕು. ಇಲ್ಲಿ ಪಿ.ಹೆಚ್.ಯು. ಮತ್ತು ಪಿ.ಹೆಚ್.ಸಿ. ಇದೆ. ನಾನು ಕೇಳಿದ ಪ್ರಶ್ನೆ ಆಲ್ಲಿ ಜನರಲ್ ಆಸ್ಪತ್ರೆ ಇದೆಯೇ ಎಂದು. ಆದ್ದರಿಂದ ಮುಂದಿನ ಆಯವ್ಯಯದಲ್ಲಾದರೂ ಆಲೂರು ತಾಲ್ಲೂಕಿಗೆ ಒಂದು ಜನರಲ್ ಆಸ್ಪತ್ರೆಯನ್ನು ಮಂಜೂರು ಮಾಡಿಕೊಡುವ ವ್ಯವಸ್ಥೆ ಮಾಡಬೇಕು. ಹಾಲಿ ಇರತಕ್ಕ ಪಿ. ಹೆಚ್. ಯು. ಅನ್ನು ಅಪ್‌ಗ್ರೇಡ್ ಮಾಡಿ, ಜನರಲ್ ಆಸ್ಪತ್ರೆ ಮಾಡುತ್ತೇವೆಂದು 1987 ರಲ್ಲಿ ಇದ್ದಂಥ ಮಂತ್ರಿಗಳು ಆಶ್ವಾಸನೆ ನೀಡಿದ್ದರೂ, ಇವತ್ತಿನವರೆಗೂ ಈ ಕೆಲಸ ಆಗಿಲ್ಲ. ನನ್ನ ಕ್ಷೇತ್ರ ಮಲೆನಾಡಿನ ಪ್ರದೇಶ; ಇಲ್ಲಿ ಖಾಯಿಲೆಗಳು ಜಾಸ್ತಿ. ಆದ್ದರಿಂದ ಪಿ.ಹೆಚ್.ಯು.ಗಳಲ್ಲಿ ಸಿಬ್ಬಂದಿ ವರ್ಗವನ್ನು ಜಾಸ್ತಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಹಣದ ಪೂರೈಕೆ ನೋಡಿಕೊಂಡು, ತಮ್ಮ ಕೇಳಿಕೆಗೆ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು ಮಾಡಿಕೊಡುತ್ತೇವೆ. ಆಲೂರು ತಾಲ್ಲೂಕು ನನಗೂ ಗೊತ್ತಿದೆ. ಸ್ವಲ್ಪ ಹೆಚ್ಚು ಕಡಿಮೆ ನಾನೂ ಕೂಡ ಅಲ್ಲಿಯವಳೇ; ಹಾಸನ ಜಿಲ್ಲೆಯವರ ಕಷ್ಟ ಸುಖ ನನಗೂ ಗೊತ್ತಿದೆ. ಆದರೆ, ತಮಗೆಲ್ಲರಿಗೂ ಗೊತ್ತಿರುವಹಾಗೆ, ಹಣದ ಕೊರತೆ ಇದೆ. ನಮಗೆ ಸಿಕ್ಕಬೇಕಾದ ಹಣದ ವ್ಯವಸ್ಥೆಯನ್ನು ನೋಡಿಕೊಂಡು, ತಮ್ಮ ಬೇಡಿಕೆಯನ್ನು ನೆರವೇರಿಸಿಕೊಡುತ್ತೇನೆ. ಮತ್ತೆ ಸಿಬ್ಬಂದಿವರ್ಗದವರನ್ನು ಕೇಳಿದ್ದೀರಿ; ನಾವು ಈಗಾಗಲೇ ಲೋಕಸೇವಾ ಆಯೋಗಕ್ಕೆ ಹೇಳಿದ್ದೇವೆ. ಆಪರು ಈ ತಿಂಗಳ ಕೊನೆಯೋ[illegible] ಡಾಕ್ಟರುಗಳ ಲಿಸ್ಟ್ ಕಳುಹಿಸಿಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲಿಂದ ಲಿಸ್ಟ್ ಬಂದತಕ್ಷಣ, ಎಲ್ಲೆಲ್ಲಿ ಡಾಕ್ಟರು ಇಲ್ಲವೋ ಅಲ್ಲಿಗೆ ಕಳುಹಿಸಿಕೊಡಲಾಗುತ್ತದೆ. ಈ ಸಮಸ್ಯೆಯ ವಿಚಾರದಲ್ಲಿ ತಮಗೊಬ್ಬರಿಗೇ ಅಲ್ಲ, ಎ[illegible]ನಸ್ಯರಿಗೂ ಇದೇ ಹೇಳುತ್ತಿದ್ದೇನೆ. ಎಲ್ಲೆಲ್ಲಿ ಡಾಕ್ಟರುಗಳು ಇಲ್ಲ, ಅಲ್ಲಿಗೆಲ್ಲಾ ಹಾಕುವುದಕ್ಕೆ ನಾವು ಪ್ರಯ[illegible] ಮಾಡುತ್ತೇವೆ.

ಶ್ರೀ ಬಿ. ಆರ್. ಗುರುದೇವ್ :– ಹಿಂದೆ ಉತ್ತರ ಕೊಟ್ಟ ಸಮಯ[illegible] ಇಡೀ ಹಾಸನ ಜಿಲ್ಲೆಯಲ್ಲಿ 27 ಜನ ಡಾಕ್ಟರುಗಳು ಕೊರತೆ ಇತ್ತು ಎಂದು ಹೇಳಿದ್ದರು. ಇದರಲ್ಲಿ 10 [illegible]ಡಾಕ್ಟರುಗಳ ಕೊರತೆ ನನ್ನ ಕ್ಷೇತ್ರದಲ್ಲಿಯೇ ಇದೆ. ಮಾನ್ಯ ಮಂತ್ರಿಗಳು ಈಗಾಗಲೇ ಆಶ್ವಾಸನೆ ನೀಡಿದಂ[illegible]ವರೇ ಹೇಳಿದಂತೆ, ಅವರ ತಾಲ್ಲೂಕಿಗೆ, ದಯಮಾಡಿ ಮುಂದಿನ ಆಯವ್ಯಯದಲ್ಲಿ ಆದ್ಯತೆ ಕೊಡಬೇ[illegible] ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ನಾನು ಈಗ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ಆಸ್ತಿ, ಆದ್ದರಿಂದ ಎಲ್ಲರ ಕಷ್ಟವನ್ನೂ ತಿಳಿದುಕೊಳ್ಳಬೇಕಾದುದು ಅತ್ಯಾವಶ್ಯಕ. ಹಣದ ಸೌಕರ್ಯ ನೋಡಿಕೊಂಡು, ಎಷ್ಟರ ಮಟ್ಟಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೋ, ಅಷ್ಟರಮಟ್ಟಿಗೆ ಮಾಡುತ್ತೇನೆ.

ವಿಷಯ :– ರಾಜ್ಯದಲ್ಲಿರುವ ಸರ್ಕಾರಿ ಕಿರಿಯ ಕಾಲೇಜುಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 243 (814)

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) :– ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಕಿರಿಯ ಕಾಲೇಜುಗಳ ಸಂಖ್ಯೆ ಎಷ್ಟು ?

2) ಆ ಕಾಲೇಜುಗಳಲ್ಲಿ ಪ್ರಾಂಶುಪಾಲರುಗಳ ನೇಮಕ ಎಷ್ಟು ಕಾಲೇಜುಗಳಲ್ಲಿ ಆಗಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :–

1) 376.
2) 239.

ಶ್ರೀ ನಾರಾಯಣರಾವ್ ಮನಹಳ್ಳಿ :– ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಉತ್ತರದ ಪ್ರಕಾರ 137 ಜೂನಿಯರ್ ಕಾಲೇಜುಗಳಲ್ಲಿ ಪ್ರಿನ್ಸಿಪಾಲರುಗಳು ಇಲ್ಲ; ಪ್ರಿನ್ಸಿಪಾಲರ ಪೋಸ್ಟಿಂಗ್ ಆಗಿಲ್ಲ. ಬಹುಶಃ ಆ ಸ್ಟಾಫ್‌ನಲ್ಲೇ ಇದ್ದಂಥ ಉಪನ್ಯಾಸಕರೊಬ್ಬರು ಇನ್‌ಚಾರ್ಜ್ ಪ್ರಿನ್ಸಿಪಾಲರಾದರೆ, ಆ ಕಾಲೇಜಿನಲ್ಲಿ ಅಭ್ಯಾಸ ಹೇಗೆ ನಡೆಯುತ್ತದೆ ಎಂಬುದು ತಮಗೂ ಗೊತ್ತಿದೆ. ಇಂತಹ 137 ಜೂನಿಯರ್ ಕಾಲೇಜುಗಳಲ್ಲಿ ಸರ್ಕಾರ ದವರು ಎಷ್ಟು ದಿವಸಗಳಲ್ಲಿ ಪ್ರಿನ್ಸಿಪಾಲರ ಪೋಸ್ಟನ್ನು ಭರ್ತಿ ಮಾಡುತ್ತಾರೆ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ 137 ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಬಡ್ತಿಯಿಂದ ತುಂಬುವುದಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಬಹುಶಃ ಕೆಲವೇ ದಿವಸಗಳಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ವಿಷಯ :– ಮೀನುಗಾರರಿಗೆ ಜೀವವಿಮಾ ಯೋಜನೆಯನ್ನು ಜಾರಿಗೊಳಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 244 (1207)

ಶ್ರೀ ಬ್ಲೇಸಿಯಸ್ ಡಿಸೋಜಾ (ಮಂಗಳೂರು) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಮಂಗಳೂರು ಆಳಿವೆಯಲ್ಲಿ 1983 ರಿಂದ ಸಂಭವಿಸಿದ ದೋಣಿ ದುರಂತಗಳ ಒಟ್ಟು ಸಂಖ್ಯೆ

2) ಜೀವ ಕಳೆದುಕೊಂಡವರ ಒಟ್ಟು ಸಂಖ್ಯೆ ?

3) ಒಟ್ಟು ಆಸ್ತಿ ನಷ್ಟ ?

4) ಸಮುದ್ರದಲ್ಲಿ ಸಂಭವಿಸುತ್ತಿರುವ ಅಪಘಾತಗಳ ಮೇಲೆ ಮೀನುಗಾರರಿಗೆ ಜೀವವಿಮಾ ಯೋಜನೆಯನ್ನು ರೂಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

5) ಹಾಗಿದ್ದಲ್ಲಿ, ಎಂದಿನಿಂದ ಈ ಯೋಜನೆಯು ಜಾರಿಗೆ ಬರಲಿದೆ ?

ಶ್ರೀ ಕೆ. ಜೆ. ಜಾರ್ಜ್ :– (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

1) 35.
2) 16.
3) ರೂ. 21.44 ಲಕ್ಷ.
4) ಇಲ್ಲಾ. ಆದರೂ ಮೀನುಗಾರರ ಸಹಕಾರ ಸಂಘಗಳ ಸಾಮೂಹಿಕ ಮೀನುಗಾರರ ಸದಸ್ಯರಿಗೆ ಜನತಾ ಪ್ರಿಯತ್ವಕ ಅಪಘಾತ ವಿಮಾ ಯೋಜನೆಯು 1983–84ನೇ ಸಾಲಿನಿಂದ ಚಾಲ್ತಿಯಲ್ಲಿದೆ.
5) ಉದ್ಭವಿಸುವುದಿಲ್ಲ.